



# ಅಂತರಿಕ್ಷಕ್ಕೀಗ ಎರಡನೆಯ ಭಾರತೀಯ!

ಭೂಕಕ್ಷೆಯಲ್ಲಿ ಕ್ರೂ ಡ್ರ್ಯಾಗನ್ ನೌಕೆ, ಕಲಾವಿದನ ಕಲ್ಪನೆಯಲ್ಲಿ...
ಚಿತ್ರಕೃಪೆ: ನಾಸಾ, ಸ್ಪೇಸ್‌ಎಕ್ಸ್

**‘ಆಕ್ಸಿಯಂ 4’ ಅಭಿಯಾನದಲ್ಲಿ ಭಾಗವಹಿಸಿ ಶುಭಾಂಶು ಶುಕ್ಲಾ ಪಡೆಯುವ ಅನುಭವ ನಮ್ಮ ದೇಶದ ‘ಗಗನಯಾನ’ ಕಾರ್ಯಕ್ರಮಕ್ಕೆ ಅತ್ಯುತ್ತಮ ಮಾಹಿತಿಯಾಗಲಿದೆ. ‘ಐಎಸ್‌ಎಸ್’ನಲ್ಲಿನ ವಾಸ್ತವ್ಯದ ಅನನ್ಯ ಅನುಭವದೊಂದಿಗೆ, ಭಾರತದಲ್ಲೇ ಯೋಜಿಸಿ ರೂಪಿಸಲಾದ ಏಳು ಪ್ರಯೋಗಗಳನ್ನು ಅವರು ಅಲ್ಲಿ ನಡೆಸಲಿದ್ದಾರೆ.**

**■ ಡಾ. ಬಿ.ಆರ್. ಗುರುಪ್ರಸಾದ್**




ಫಾಲ್ಕನ್ 9. ಈ ರಾಕೆಟ್ ವಾಹನ ಅಂತರಿಕ್ಷಯಾನದ ಇತಿಹಾಸವನ್ನೇ ಬದಲಿಸಿ ಜಗತ್ತಿನಾದ್ಯಂತ ಖ್ಯಾತಿ ಪಡೆದಿದೆ. ಇದು ಒಂದು ದಕ್ಷ ಉಡಾವಣಾ ವಾಹನವಾಗಿರುವುದರ ಜೊತೆಗೆ ಮರುಪಯೋಗಕ್ಕೂ ಬರುವುದರಿಂದ ಉಡಾವಣಾ ವೆಚ್ಚ ಕಡಿಮೆಯಾಗಿ ಅಂತರಿಕ್ಷಯಾನ ಹೆಚ್ಚು ಹೆಚ್ಚು ‘ಕೈಗೆಟಕುತ್ತಿದೆ’. ಇದರಿಂದಾಗಿ ಸಹಜವಾಗಿಯೇ ಈ ವಾಹನವಿಂದು ಜಗತ್ತಿನ ಮೆಚ್ಚುಗೆ ಪಡೆದಿದೆ. ಇದುವರೆಗೂ ‘ಫಾಲ್ಕನ್ 9’ ಏಳು ಸಾವಿರಕ್ಕೂ ಹೆಚ್ಚು ಉಪಗ್ರಹಗಳನ್ನು ಕಕ್ಷೆಗೆ ಹಾರಿಬಿಟ್ಟಿದೆ! ಈ ಕ್ರಾಂತಿಕಾರಕ ರಾಕೆಟ್ ವಾಹನವನ್ನು ನಿರ್ಮಿಸಿರುವುದು ಇಂದು ಜಗತ್ತಿನಾದ್ಯಂತ ಮನೆಮಾತಾಗಿರುವ ಇಲಾನ್ ಮಸ್ಕ್ ಅವರ ಒಡೆತನವಿರುವ ‘ಸ್ಪೇಸ್‌ಎಕ್ಸ್’ ಎಂಬ ಖಾಸಗಿ ಸಂಸ್ಥೆ.

2020ರಿಂದೀಚೆಗೆ ಈ ವಾಹನ ಅನೇಕ ಗಗನಯಾತ್ರಿಗಳನ್ನು ಅಂತರಿಕ್ಷಕ್ಕೆ ಉಡಾಯಿಸಿದ್ದರೂ ಈ ಬಾರಿಯ ಯಾನ ಭಾರತದಾದ್ಯಂತ ಕುತೂಹಲ ಕೆರಳಿಸಿದೆ. ಕಾರಣ, ಆ ರಾಕೆಟ್ ವಾಹನದ ಮೇಲೆ ಜೋಡಿಸಲಾಗಿರುವ ಸ್ಪೇಸ್ ಎಕ್ಸ್ ಸಂಸ್ಥೆಯದೇ ಆದ ‘ಕ್ರೂ ಡ್ರ್ಯಾಗನ್’ ನೌಕೆಯೊಂದರಲ್ಲಿ ಭಾರತದ ಎರಡನೇ ಗಗನಯಾತ್ರಿ ಶುಭಾಂಶು ಶುಕ್ಲಾ ಅಂತರಿಕ್ಷಕ್ಕೆ ಪಯಣಿಸಲಿದ್ದಾರೆ. 140 ಕೋಟಿ ಭಾರತೀಯರ ಆಶಾಭಾವನೆಯನ್ನು ಶುಕ್ಲಾ ಅವರು ಪ್ರತಿನಿಧಿಸುತ್ತಿರಲಾಗಿ ಅವರ ಯಾನ ಸಹಜವಾಗಿಯೇ ಸಂಚಲನ ಉಂಟುಮಾಡಿದೆ.

ಇದಕ್ಕೆ ಮೊದಲು ಅಂತರಿಕ್ಷಕ್ಕೆ ಭಾರತೀಯನೊಬ್ಬನು ತೆರಳಿದ್ದು 41 ವರ್ಷಗಳ ಹಿಂದೆ. ಮೊದಲ ಗಗನಯಾತ್ರಿ ರಾಕೇಶ್ ಶರ್ಮಾ.

ಇದೇನು? ಶರ್ಮಾ ಅವರ ನಂತರ ಕಲ್ಪನಾ ಚಾವ್ಲಾ ಅವರು ಎರಡು ಬಾರಿ ಅಂತರಿಕ್ಷಕ್ಕೆ ತೆರಳಲಿಲ್ಲವೇ? ಎರಡನೆಯ ಯಾನದಿಂದ ಭೂಮಿಗೆ ಹಿಂತಿರುಗುವಾಗ ತಮ್ಮ ಜೀವ ತೆರಲಿಲ್ಲವೇ? ಅದಿರಲಿ, ಅಂತರಿಕ್ಷದಲ್ಲಿ 286 ದಿನ ‘ಸಿಲುಕಿ’ ಇತ್ತೀಚೆಗೆ ಸುರಕ್ಷಿತವಾಗಿ ಹಿಂತಿರುಗಿ ಬಂದು ಇದೀಗ ಭೂಮಿಯ ಮೇಲಿನ ಜೀವನಕ್ಕೆ ಮತ್ತೆ